ರಾಣಿ ಚನ್ನಮ್ಮ ವಿಶ್ವವಿದ್ಯಾಲಯ
ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ – 04, ಭೂತರಾಮನಹಟ್ಟಿ, ಬೆಳಗಾವಿ – 591156

# RANI CHANNAMMA UNIVERSITY

Vidyasangama, National Highway - 04, Bhootaramanahatti, Belagavi - 591156
E-mail: rcubacademic2010@gmail.com
rcuregistrar@gmail.com
ಕುಲಸಚಿವರ ಕಾರ್ಯಾಲಯ
Office of the Registrar
Website: www.rcub.ac.in
Phone No.: 0831-2565257/34

ಕ್ರ ಸಂ: ರಾಚವಿ/ಬೆಳಗಾವಿ/ಕುಸಕಾ/2021-22/ 1907 ದಿನಾಂಕ: 25 AUG 2021

## ಸುತ್ತೋಲೆ

ವಿಷಯ: ರಾಜ್ಯದಲ್ಲಿ ಸಮಗ್ರ ವಿಶ್ವವಿದ್ಯಾಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆ ಮೂಲಕ ರಾಷ್ಟ್ರೀಯ ಶಿಕ್ಷಣ ನೀತಿ-2020 ರನ್ವಯ 2021-22 ನೇ ಸಾಲಿಗೆ ಪ್ರಥಮ ವರ್ಷದ ಪ್ರವೇಶಾತಿಗೆ ಸಂಬಂಧಿಸಿ ಸಮಗ್ರ ವಿಶ್ವವಿದ್ಯಾಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆ(UUCMS) ವೆಬ್‌ಸೈಟ್‌ನಲ್ಲಿ ಅಳವಡಿಸುವುದರ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಗಳ ಮೌಖಿಕ ನಿರ್ದೇಶನ ದಿನಾಂಕ: 24-08-2021.

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖದನ್ವಯ, **ಬೆಳಗಾವಿ ಜಿಲ್ಲೆಯ** ಎಲ್ಲ ಸ್ನಾತಕ ಸಂಯೋಜಿತ ಮಹಾವಿದ್ಯಾಲಯದ ಪ್ರಾಂಶುಪಾಲರಿಗೆ ಈ ಮೂಲಕ ತಿಳಿಸುವುದೇನೆಂದರೆ ಸರ್ಕಾರದ ಆದೇಶದನ್ವಯ ರಾಜ್ಯದಲ್ಲಿ ಸಮಗ್ರ ವಿಶ್ವವಿದ್ಯಾಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆ ಮೂಲಕ ರಾಷ್ಟ್ರೀಯ ಶಿಕ್ಷಣ ನೀತಿ-2020 ರನ್ವಯ 2021-22 ನೇ ಸಾಲಿಗೆ ಪ್ರಥಮ ವರ್ಷದ ಪ್ರವೇಶಾತಿ ವಿವರಗಳನ್ನು ಸಮಗ್ರ ವಿಶ್ವವಿದ್ಯಾಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆ(UUCMS) ವೆಬ್‌ಸೈಟ್‌ನಲ್ಲಿ ನಮೂದಿಸುವುದು ಅವಶ್ಯವಕವಾಗಿರುತ್ತದೆ. 2021-22ನೇ ಸಾಲಿಗೆ ಪ್ರಥಮ ವರ್ಷದ ಪ್ರವೇಶಾತಿ ವಿವರಗಳನ್ನು ಸಮಗ್ರ ವಿಶ್ವವಿದ್ಯಾಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆ(UUCMS) ವೆಬ್‌ಸೈಟ್‌ನಲ್ಲಿ ನಮೂದಿಸುವ ಬಗ್ಗೆ **ದಿನಾಂಕ: 26-08-2021 ರಂದು ಸಮಯ: 12:00 ರಿಂದ 01 ರ ವರೆಗೆ** Google Meet ಮೂಲಕ ತರಬೇತಿ ಕಾರ್ಯಾಗಾರ ಏರ್ಪಡಿಸಲಾಗಿದೆ.

ಮುಂದುವರೆದು **ಬೆಳಗಾವಿ ಜಿಲ್ಲೆಯ** ಎಲ್ಲ ಸ್ನಾತಕ ಸಂಯೋಜಿತ ಮಹಾವಿದ್ಯಾಲಯದ ಪ್ರಾಂಶುಪಾಲರು ಮತ್ತು ತಮ್ಮ ಮಹಾವಿದ್ಯಾಲಯದ (UUCMS) ನೋಡಲ್ ಅಧಿಕಾರಿಗಳೊಂದಿಗೆ ಸದರಿ ತರಬೇತಿ ಕಾರ್ಯಾಗಾರಕ್ಕೆ ಹಾಜರಾಗಿ ಮಾಹಿತಿ ಪಡೆದುಕೊಳ್ಳಲು ತಿಳಿಸಿದೆ. ಸದರಿ ತರಬೇತಿಯ ಹಾಜರಾತಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಬೇಕಾಗಿರುವುದರಿಂದ ಯಾವುದೇ ಕಾರಣಕ್ಕೂ ತರಬೇತಿಗೆ ಗೈರು ಹಾಜರಾಗದಂತೆ ಸೂಚಿಸಿದೆ. ಸದರಿ ಸಭೆಯ Meeting Link ಮಹಾವಿದ್ಯಾಲಯಗಳಿಗೆ ಕಳುಹಿಸಲಾಗಿದೆ ಹಾಗೂ ಅದು ಈ ಕೆಳಗಿನಂತಿದೆ.

**UUCMS ADMISSION PROCESS TRAINING 1**
**Thursday, August 26 · 12:00 – 1:00pm**
**Google Meet joining info**
**Video call link: https://meet.google.com/fgz-oqct-rhj**
**Or dial: (US) +1 319-406-2038 PIN: 366 776 208#**

ಕುಲಸಚಿವರು

ಇವರಿಗೆ, ಪ್ರಾಂಶುಪಾಲರುಗಳಿಗೆ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಡುವ ಬೆಳಗಾವಿ ಜಿಲ್ಲೆಯ ಎಲ್ಲ ಸ್ನಾತಕ ಸಂಯೋಜಿತ ಮಹಾವಿದ್ಯಾಲಯಗಳು.

ಪ್ರತಿ ಮಾಹಿತಿಗಾಗಿ:

1. ಕುಲಸಚಿವರು(ಮೌ) ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
2. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
3. ಉಪಕುಲಸಚಿವರು/ಸಹಾಯಕ ಕುಲಸಚಿವರು, ವಿದ್ಯಾಮಂಡಳ ವಿಭಾಗ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
4. ಮಾನ್ಯ ಕುಲಪತಿಗಳ ಆಪ್ತಕಾರ್ಯದರ್ಶಿಗಳು, ಕುಲಪತಿಗಳ ಸಚಿವಾಲಯ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.

Email
Date 25/08/2021

ಕುಲಸಚಿವರ ಕಾರ್ಯಾಲಯ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿ

Scanned with CamScanner

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ
ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ – 04, ಭೂತರಾಮನಹಟ್ಟಿ, ಬೆಳಗಾವಿ – 591156
RANI CHANNAMMA UNIVERSITY
Vidyasangama, National Highway – 04, Bhootaramanahatti, Belagavi - 591156
Email: rcubacademic2010@gmail.com
rcuregistrar@gmail.com
ಕುಲಸಚಿವರ ಕಾರ್ಯಾಲಯ
Office of the Registrar
Website: www.rcub.ac.in
Phone No.: 0831-2565214/34

ಕ್ರ.ಸಂ.: ರಾಚವಿ/ಬೆಳಗಾವಿ/ಸ್ನಾತಕ ವಿಭಾಗ/2021–22/2021 ದಿನಾಂಕ: 28 AUG 2021

# ಸುತ್ತೋಲೆ

ವಿಷಯ: 2021–22ನೇ ಶೈಕ್ಷಣಿಕ ಸಾಲಿನ ಸ್ನಾತಕ ಕೋರ್ಸಗಳ ಪ್ರವೇಶ ಪ್ರಕ್ರಿಯೆಯನ್ನು ಪ್ರಾರಂಭಿಸುವ ಕುರಿತು.

ಉಲ್ಲೇಖ: 1. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 22.08.2021
2. ಕಚೇರಿ ಪತ್ರ ಸಂ: ರಾಚವಿ/ಬೆಳಗಾವಿ/ಸ್ನಾತಕ ವಿಭಾಗ/2021–22/1836/1, ದಿನಾಂಕ: 22.08.2021

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಗಳನ್ವಯ, 2021–22ನೇ ಶೈಕ್ಷಣಿಕ ಸಾಲಿಗಾಗಿ ಸ್ನಾತಕ ಕೋರ್ಸಗಳ ಪ್ರಥಮ ಸೆಮಿಸ್ಟರ್‌ನ ಪ್ರವೇಶಾತಿಯನ್ನು ಬಯಸಿ ಬಂದಂತಹ ವಿದ್ಯಾರ್ಥಿಗಳ ಪ್ರವೇಶವನ್ನು ದಿನಾಂಕ: 23.08.2021 ರಿಂದ ಭೌತಿಕವಾಗಿ ಪಡೆದುಕೊಂಡು, ಪ್ರವೇಶ ಪ್ರಕ್ರಿಯೆ ಮುಗಿದ ತರುವಾಯ ವಿದ್ಯಾರ್ಥಿಗಳ ಮಾಹಿತಿಯನ್ನು ಆಯಾ ಮಹಾವಿದ್ಯಾಲಯಗಳ ಪ್ರಾಂಶುಪಾಲರು UUCMS ತಂತ್ರಾಂಶದಲ್ಲಿ ಭರ್ತಿ ಮಾಡಬೇಕಾಗುತ್ತದೆ. ತದನಂತರ ವಿದ್ಯಾರ್ಥಿಗಳು ನೇರವಾಗಿ ತಮ್ಮ ಭಾವಚಿತ್ರ ಮತ್ತು ಸಹಿಯನ್ನು UUCMS ತಂತ್ರಾಂಶದಲ್ಲಿ ಸೇರಿಸುವ ಪ್ರಕ್ರಿಯೆಯು ಇರುತ್ತದೆ. ಮುಂದುವರೆದು, ಭೌತಿಕವಾಗಿ ಪ್ರವೇಶಾತಿಯನ್ನು ಪಡೆದುಕೊಂಡ ವಿದ್ಯಾರ್ಥಿಗಳ ನೋಂದಣಿ ಮತ್ತು ಇತರೆ ಶುಲ್ಕಗಳನ್ನು ವಿಶ್ವವಿದ್ಯಾಲಯದಿಂದ ತಿಳಿಸುವ ದಿನಾಂಕಗಳಂದು ಹಂತ ಹಂತವಾಗಿ ಆಯಾ ದಿನಾಂಕಗಳು ಮುಗಿದ ಒಂದು ದಿನದ ನಂತರದಲ್ಲಿ ಕಡ್ಡಾಯವಾಗಿ ವಿಶ್ವವಿದ್ಯಾಲಯಕ್ಕೆ ಡಿ.ಡಿ. ಮುಖಾಂತರ ಭರಿಸಬೇಕಾಗಿರುತ್ತದೆ. ಇದು ತಪ್ಪಿದ್ದಲ್ಲಿ ಮುಂದಿನ ಹಂತದ ದಂಡವನ್ನು ಆಕರಣೆ ಮಾಡಲಾಗುವುದು. ಇದಕ್ಕೆ ಆಯಾ ಮಹಾವಿದ್ಯಾಲಯಗಳ ಪ್ರಾಂಶುಪಾಲರೇ ನೇರವಾಗಿ ಹೊಣೆಗಾರರಾಗುತ್ತಾರೆ.

3ನೇ ಮತ್ತು 5ನೇ ಸೆಮಿಸ್ಟರ್‌ನ ಪ್ರವೇಶಾತಿಯನ್ನು ಯುನಿವ್ಹೇರ್ ತಂತ್ರಾಂಶದ ಮೂಲಕ ದಿನಾಂಕ: 01.09.2021 ರಿಂದ ಪಡೆದುಕೊಂಡು, ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕಾದ ವಿದ್ಯಾರ್ಥಿಗಳ ನೋಂದಣಿ ಮತ್ತು ಇತರೆ ಶುಲ್ಕಗಳನ್ನು ಕಡ್ಡಾಯವಾಗಿ ಆನ್‌ಲೈನ್ ಮುಖಾಂತರವೇ ಭರಿಸುವಂತೆ ಕ್ರಮಕೈಗೊಳ್ಳಲು ಈ ಮೂಲಕ ಎಲ್ಲ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ ತಿಳಿಸಲಾಗಿದೆ.

*ಸೂಚನೆ:*

1. *2021–22ನೇ ಶೈಕ್ಷಣಿಕ ಸಾಲಿಗೆ ಪ್ರವೇಶಾತಿ ಶುಲ್ಕವನ್ನು 2020–21 ರಂತೆಯೇ ಮುಂದುವರೆಸುವುದು.*
2. *ಎಸ್.ಸಿ., ಎಸ್.ಟಿ. ಮತ್ತು ಪ್ರವರ್ಗ–1 ವಿದ್ಯಾರ್ಥಿಗಳಿಗೆ ನೋಂದಣಿ ಶುಲ್ಕದಲ್ಲಿ 50%ರಷ್ಟು ವಿನಾಯಿತಿ ಇರುತ್ತದೆ. ವಿನಾಯಿತಿ ನೀಡಿದ 50% ನೋಂದಣಿ ಶುಲ್ಕವನ್ನು ವಿದ್ಯಾರ್ಥಿವೇತನವು ಮಂಜೂರಾಗಿ ಬಂದ ಮೊತ್ತದಿಂದ ಒಂದು ವಾರದಲ್ಲಿ ವಿಶ್ವವಿದ್ಯಾಲಯಕ್ಕೆ ಕಡ್ಡಾಯವಾಗಿ ಭರಿಸತಕ್ಕದ್ದು. ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸದ ಹಾಗೂ ಅರ್ಜಿ ಸಲ್ಲಿಸಿದ್ದರೂ ವಿದ್ಯಾರ್ಥಿವೇತನ ಮಂಜೂರಾಗದೇ ಇರುವಂತಹ ವಿದ್ಯಾರ್ಥಿಗಳು ವಿನಾಯಿತಿ ನೀಡಿದ 50%ರಷ್ಟು ಮೊತ್ತವನ್ನು ಮಹಾವಿದ್ಯಾಲಯಕ್ಕೆ ತಾವೇ ಭರಿಸಿ, ವಿಶ್ವವಿದ್ಯಾಲಯಕ್ಕೆ ಭರಿಸುವಂತೆ ಮಹಾವಿದ್ಯಾಲಯದ ಪ್ರಾಚಾರ್ಯರು ಕ್ರಮಕೈಗೊಳ್ಳುವುದು.*

ಕುಲಸಚಿವರು
ಕುಲಸಚಿವರು
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ
ವಿದ್ಯಾ ಸಂಗಮ
ಬೆಳಗಾವಿ-591156, ಕರ್ನಾಟಕ

ಇವರಿಗೆ,

1. ಪ್ರಾಚಾರ್ಯರು, ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿ.
2. ಪ್ರಾಚಾರ್ಯರು, ಬೆಳಗಾವಿ, ವಿಜಯಪುರ ಮತ್ತು ಬಾಗಲಕೋಟ ಜಿಲ್ಲೆಗಳಲ್ಲಿನ ಸಂಯೋಜಿತ ಸ್ನಾತಕ ಮಹಾವಿದ್ಯಾಲಯಗಳು.
3. ಕಡತ ಪ್ರತಿ.

Email
Date: 28/08/2021

Scanned with CamScanner

# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ– 04, ಭೂತರಾಮನಹಟ್ಟಿ, ಬೆಳಗಾವಿ – 591156

# RANI CHANNAMMA UNIVERSITY

Vidyasangama, National Highway – 04, Bhootaramanahatti, Belagavi - 591156

E-mail:rcubacademic2010@gmail.com
rcuregistrar@gmail.com

ಕುಲಸಚಿವರ ಕಾರ್ಯಾಲಯ
Office of the Registrar

Website: www.rcub.ac.in
Phone No.: 0831-2565234/203


ಕ್ರ.ಸಂ.: ರಾಚವಿ/ಬೆಳಗಾವಿ/ಸಿಡಿಸಿ/2021-22/ 91

ದಿನಾಂಕ: 14-09-2021

## ಸುತ್ತೋಲೆ

ವಿಷಯ: 2021-22ನೇ ಸಾಲಿಗೆ ರಾಷ್ಟ್ರೀಯ ಶಿಕ್ಷಣ ನೀತಿ-2020ರನ್ವಯ ಸ್ನಾತಕ ಕೋರ್ಸಗಳ ಪ್ರಥಮ ವರ್ಷಕ್ಕೆ ಪ್ರವೇಶ ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು.

ಉಲ್ಲೇಖ: 1. ಸರ್ಕಾರದ ಆದೇಶ ಪತ್ರ ಸಂಖ್ಯೆ: ಇಡಿ 34 ಇಜಿಬಿವ್ಹಿ 2020. ದಿನಾಂಕ: 25-08-2021.

2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:14-09-2021.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ. ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಎಲ್ಲ ಸಂಯೋಜಿತ ಮಹಾವಿದ್ಯಾಲಯಗಳಿಗೆ ತಿಳಿಸುವುದೇನೆಂದರೆ, ಉಲ್ಲೇಖ 1ರ ಮೂಲಕ ಕರ್ನಾಟಕ ಸರ್ಕಾರವು ರಾಷ್ಟ್ರೀಯ ಶಿಕ್ಷಣ ನೀತಿ-2020 ನ್ನು 2021-22ನೇ ಸಾಲಿನಿಂದ ಜಾರಿಗೊಳಿಸಿ ಆದೇಶಿಸಿರುವುದರಿಂದ ವಿಶ್ವವಿದ್ಯಾಲಯವು ಕೂಡಾ ರಾಷ್ಟ್ರೀಯ ಶಿಕ್ಷಣ ನೀತಿ-2020 ನ್ನು ಅನುಷ್ಠಾನಕ್ಕೆ ತರಲು ಮಾನ್ಯ ಕುಲಪತಿಗಳು ನೀಡಿದ ಅನುಮೋದನೆ ನೀಡಿದಂತೆ, 2021-22ನೇ ಸಾಲಿನಿಂದ ಪ್ರಥಮ ವರ್ಷದಿಂದ ಜಾರಿಗೊಳಿಸಲಾಗುತ್ತಿದೆ.

ಪ್ರಥಮ ವರ್ಷಕ್ಕೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಯಾವ ತೆರನಾಗಿ ವಿಷಯಗಳ ಆಯ್ಕೆ ಮಾಡಿಕೊಳ್ಳುವುದು, ವಿದ್ಯಾರ್ಥಿಗಳ ಪ್ರವೇಶ ಮಿತಿ ನಿಗದಿಗೆ ಸಂಬಂಧಿಸಿದಂತೆ ಸುತ್ತೋಲೆಗೆ ಲಗತ್ತಿಸಿದ ಮಾರ್ಗಸೂಚಿ, ಪ್ರವೇಶ ಮಿತಿ ಹಂಚಿಕೆ ವಿಧಾನದ ಮಾದರಿಯನ್ನು ಪರಿಶೀಲಿಸುವಂತೆ ಹಾಗೂ ಅದರನ್ವಯ ಅಗತ್ಯ ಕ್ರಮ ಕೈಗೊಳ್ಳುವಂತೆ ಈ ಮೂಲಕ ತಮಗೆ ತಿಳಿಸಲಾಗಿದೆ.

ನಿರ್ದೇಶಕರು
ಕಾಲೇಜು ಅಭಿವೃದ್ಧಿ ಮಂಡಳಿ

ಅಡಕ:

1. ಮಾರ್ಗಸೂಚಿಗಳು
2. ಪ್ರವೇಶ ಮಿತಿ ಹಂಚಿಕೆ ವಿಧಾನದ ಮಾದರಿ

ಇವರಿಗೆ,

ಎಲ್ಲ ಸಂಯೋಜಿತ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ,

Scanned with CamScanner